# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : 60 |
| ಮಾನ್ಯ ಸದಸ್ಯರ ಹೆಸರು | : ಶ್ರೀ ಗೋವಿಂದ ರಾಜು<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : 08.12.2025 |
| ಉತ್ತರಿಸಬೇಕಾದ ಸಚಿವರು | : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 5 ವರ್ಷಗಳಿಂದ ಇಲ್ಲಿಯವರೆಗೂ ರಾಜ್ಯದಲ್ಲಿರುವ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಆಗಿರುವ ಹೆರಿಗೆ ಪ್ರಮಾಣಗಳೆಷ್ಟು; (ಜಿಲ್ಲಾವಾರು ವರದಿ ನೀಡುವುದು) | ಕಳೆದ 5 ವರ್ಷಗಳಿಂದ ರಾಜ್ಯದ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಆಗಿರುವ ಹೆರಿಗೆ ಪ್ರಮಾಣದ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ. |
| ಆ) | ಕೋಲಾರ ಜಿಲ್ಲೆಯಲ್ಲಿರುವ ಖಾಸಗಿ ಆಸ್ಪತ್ರೆಗಳಲ್ಲಿ ಸಿಸೇರಿಯನ್ (ಸಿ-ಸೆಕ್ಷನ್) ಹೆರಿಗೆ ಪ್ರಮಾಣ ಹೆಚ್ಚುತ್ತಿದ್ದು, 2024-25 ನೇ ಸಾಲಿನಲ್ಲಿ ಶೇ.70 ಹಾಗೂ 2025-26ನೇ ಸಾಲಿನ ಆಗಸ್ಟ ಅಂತ್ಯದದವರೆಗೆ ಶೇ.72ರಷ್ಟು ಪ್ರಮಾಣದಲ್ಲಿ ಸಿಸೇರಿಯನ್ ಪ್ರಕರಣಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>ಕೋಲಾರ ಜಿಲ್ಲೆಯಲ್ಲಿ ಖಾಸಗಿ ಆಸ್ಪತ್ರೆಯಲ್ಲಿ ಆಗಿರುವ ಸಿಸೇರಿಯನ್ (ಸಿ-ಸೆಕ್ಷನ್) ಹೆರಿಗೆ 2024-25ನೇ ಸಾಲಿನಲ್ಲಿ ಶೇ.68 ಹಾಗೂ 2025-26ನೇ ಸಾಲಿನ ಆಗಸ್ಟ ಅಂತ್ಯದವರೆಗೆ ಶೇ.68ರಷ್ಟು ಪ್ರಮಾಣದಲ್ಲಿ ಪ್ರಕರಣಗಳು ದಾಖಲಾಗಿರುತ್ತವೆ. |
| ಇ) | ಹಣ ವಸೂಲಿಗಾಗಿ ಅನಗತ್ಯವಾಗಿ ಸಿಸೇರಿಯನ್ ಹೆರಿಗೆ ಮಾಡುವ ಖಾಸಗಿ ಆಸ್ಪತ್ರೆಗಳನ್ನು ಗುರುತಿಸಿದೆಯೇ; ಹಾಗೂ ಸಾರ್ವಜನಿಕರಿಂದ ಸರ್ಕಾರಕ್ಕೆ ದೂರುಗಳು ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; | • ಹಣ ವಸೂಲಿಗಾಗಿ ಅನಗತ್ಯವಾಗಿ ಸಿಸೇರಿಯನ್ ಹೆರಿಗೆ ಮಾಡುವಂತಹ ಖಾಸಗಿ ಆಸ್ಪತ್ರೆಗಳನ್ನು ನಿರ್ದಿಷ್ಟವಾಗಿ ಗುರುತಿಸಿರುವುದಿಲ್ಲ.<br><br>• ಖಾಸಗಿ ಆಸ್ಪತ್ರೆಗಳು ಹಣ ವಸೂಲಿಗಾಗಿ ಅನಗತ್ಯವಾಗಿ ಸಿಸೇರಿಯನ್ ಹೆರಿಗೆ ಮಾಡಿರುವ ಬಗ್ಗೆ, ಜಿಲ್ಲಾ ಕೆ.ಪಿ.ಎಂ.ಇ, ನೋಂದಣಿ ಮತ್ತು ಕುಂದು ಕೊರತೆ ನಿವಾರಣಾ ಪ್ರಾಧಿಕಾರದಲ್ಲಿ ಯಾವುದೇ ದೂರುಗಳು ಸಾರ್ವಜನಿಕರಿಂದ ಸ್ವೀಕೃತವಾಗಿರುವುದಿಲ್ಲ.<br><br>• ದೂರುಗಳು ಬಂದಲ್ಲಿ, ನಿಯಮ ಉಲ್ಲಂಘಿಸಿದ ಖಾಸಗಿ ಆಸ್ಪತ್ರೆಯ ವಿರುದ್ಧ ಕೆ.ಪಿ.ಎಂ.ಇ ಅಧಿನಿಯಮದ ಸೆಕ್ಷನ್ 15 ಉಪಬಂಧ 1ರನ್ವಯ ಕ್ರಮ ಜರುಗಿಸಲಾಗುವುದು. |
| ಈ) | ಗರ್ಭಿಣಿಯರಿಗೆ ತಪಾಸಣೆ ಮಾಡುವ ಸಂದರ್ಭದಲ್ಲಿ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳು ಅನುಸರಿಬೇಕಾಗಿರುವ ನೀತಿ ನಿಯಮಗಳೇನು ಹಾಗೂ ನಿಯಮದ ವಿರುದ್ಧವಾಗಿ ನಡೆದುಕೊಂಡ ಆಸ್ಪತ್ರೆಗಳ ಮೇಲೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು? | • ಗರ್ಭಿಣಿಯರಿಗೆ ತಪಾಸಣೆ ಮಾಡುವ ಸಂದರ್ಭದಲ್ಲಿ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಗಳು ಅನುಸರಿಬೇಕಾದ ನೀತಿ ನಿಯಮಗಳ ಮಾಹಿತಿಯನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ.<br><br>• ನಿಯಮ ಉಲ್ಲಂಘಿಸಿದ ಖಾಸಗಿ ಆಸ್ಪತ್ರೆಯ ವಿರುದ್ಧ ಕೆ.ಪಿ.ಎಂ.ಇ, ಅಧಿನಿಯಮದ ಸೆಕ್ಷನ್15 ಉಪಬಂಧ 1ರನ್ವಯ ಕ್ರಮ ಜರುಗಿಸಲಾಗುವುದು. |

**ಸಂಖ್ಯೆ: ಆಕುಕ 97 ಎಸ್.ಟಿ.ಕ್ಯೂ 2025**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

# ಅನುಬಂಧ-1 ಪ್ರಶ್ನೆ ಸಂಖ್ಯೆ -60

ಕಳೆದ 5 ವರ್ಷಗಳ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳ ಜಿಲ್ಲಾವಾರು ಹೆರಿಗೆ ಪ್ರಮಾಣದ ವಿವರಗಳು (ಮೂಲ: ಆರ್.ಸಿ.ಹೆಚ್ ತಂತ್ರಾಂಶ)

| | | 2020-21 | | 2021-22 | | 2022-23 | | 2023-24 | | 2024-25 | | 2025-26 upto Aug | |
|---|---|---|---|---|---|---|---|---|---|---|---|---|---|
| ಕ್ರ.ಸ | ಜಿಲ್ಲೆ | ಸರ್ಕಾರಿ ಆಸ್ಪತ್ರೆಗಳಲ್ಲಿ ಹೆರಿಗೆಗಳು ಪ್ರಮಾಣ | ಖಾಸಗಿ ಆಸ್ಪತ್ರೆಗಳಲ್ಲಿ ಹೆರಿಗೆಗಳು ಪ್ರಮಾಣ | ಸರ್ಕಾರಿ ಆಸ್ಪತ್ರೆಗಳಲ್ಲಿ ಹೆರಿಗೆಗಳು ಪ್ರಮಾಣ | ಖಾಸಗಿ ಆಸ್ಪತ್ರೆಗಳಲ್ಲಿ ಹೆರಿಗೆಗಳು ಪ್ರಮಾಣ | ಸರ್ಕಾರಿ ಆಸ್ಪತ್ರೆಗಳಲ್ಲಿ ಹೆರಿಗೆಗಳು ಪ್ರಮಾಣ | ಖಾಸಗಿ ಆಸ್ಪತ್ರೆಗಳಲ್ಲಿ ಹೆರಿಗೆಗಳು ಪ್ರಮಾಣ | ಸರ್ಕಾರಿ ಆಸ್ಪತ್ರೆಗಳಲ್ಲಿ ಹೆರಿಗೆಗಳು ಪ್ರಮಾಣ | ಖಾಸಗಿ ಆಸ್ಪತ್ರೆಗಳಲ್ಲಿ ಹೆರಿಗೆಗಳು ಪ್ರಮಾಣ | ಸರ್ಕಾರಿ ಆಸ್ಪತ್ರೆಗಳಲ್ಲಿ ಹೆರಿಗೆಗಳು ಪ್ರಮಾಣ | ಖಾಸಗಿ ಆಸ್ಪತ್ರೆಗಳಲ್ಲಿ ಹೆರಿಗೆಗಳು ಪ್ರಮಾಣ | ಸರ್ಕಾರಿ ಆಸ್ಪತ್ರೆಗಳಲ್ಲಿ ಹೆರಿಗೆಗಳು ಪ್ರಮಾಣ | ಖಾಸಗಿ ಆಸ್ಪತ್ರೆಗಳಲ್ಲಿ ಹೆರಿಗೆಗಳು ಪ್ರಮಾಣ |
| 1 | ಬಾಗಲಕೋಟೆ | 65% | 35% | 65% | 35% | 66% | 34% | 66% | 34% | 64% | 36% | 65% | 35% |
| 2 | ಬಳ್ಳಾರಿ | 75% | 25% | 77% | 23% | 78% | 22% | 78% | 22% | 76% | 24% | 76% | 24% |
| 3 | ಬೆಳಗಾವಿ | 54% | 46% | 50% | 50% | 56% | 44% | 59% | 41% | 59% | 41% | 58% | 42% |
| 4 | ಬೆಂಗಳೂರು ಗ್ರಾ. | 69% | 31% | 66% | 34% | 65% | 35% | 62% | 38% | 58% | 42% | 56% | 44% |
| 5 | ಬೆಂಗಳೂರು ನಗರ | 70% | 30% | 66% | 34% | 61% | 39% | 59% | 41% | 56% | 44% | 56% | 44% |
| 6 | ಬೀದರ್ | 67% | 33% | 61% | 39% | 58% | 42% | 57% | 43% | 52% | 48% | 52% | 48% |
| 7 | ಚಾಮರಾಜನಗರ | 86% | 14% | 84% | 16% | 82% | 18% | 81% | 19% | 78% | 22% | 78% | 22% |
| 8 | ಚಿಕ್ಕಬಳ್ಳಾಪುರ | 83% | 17% | 77% | 23% | 73% | 27% | 69% | 31% | 65% | 35% | 67% | 33% |
| 9 | ಚಿಕ್ಕಮಗಳೂರು | 70% | 30% | 64% | 36% | 65% | 35% | 62% | 38% | 60% | 40% | 60% | 40% |
| 10 | ಚಿತ್ರದುರ್ಗ | 74% | 26% | 73% | 27% | 72% | 28% | 71% | 29% | 68% | 32% | 66% | 34% |
| 11 | ದಕ್ಷಿಣ ಕನ್ನಡ | 42% | 58% | 31% | 69% | 29% | 71% | 27% | 73% | 24% | 76% | 23% | 77% |
| 12 | ದಾವಣಗೆರೆ | 73% | 27% | 68% | 32% | 66% | 34% | 64% | 36% | 61% | 39% | 62% | 38% |
| 13 | ಧಾರವಾಡ | 65% | 35% | 66% | 34% | 67% | 33% | 69% | 31% | 70% | 30% | 68% | 32% |
| 14 | ಗದಗ | 76% | 24% | 76% | 24% | 76% | 24% | 76% | 24% | 75% | 25% | 78% | 22% |
| 15 | ಹಾಸನ | 73% | 27% | 75% | 25% | 75% | 25% | 73% | 27% | 71% | 29% | 73% | 27% |
| 16 | ಹಾವೇರಿ | 76% | 24% | 76% | 24% | 76% | 24% | 76% | 24% | 76% | 24% | 76% | 24% |
| 17 | ಕಲಬುರಗಿ | 76% | 24% | 78% | 22% | 75% | 25% | 68% | 32% | 61% | 39% | 59% | 41% |
| 18 | ಕೊಡಗು | 84% | 16% | 84% | 16% | 82% | 18% | 78% | 22% | 79% | 21% | 81% | 19% |
| 19 | ಕೋಲಾರ | 74% | 26% | 68% | 32% | 67% | 33% | 65% | 35% | 60% | 40% | 60% | 40% |
| 20 | ಕೊಪ್ಪಳ | 75% | 25% | 77% | 23% | 78% | 22% | 78% | 22% | 76% | 24% | 77% | 23% |
| 21 | ಮಂಡ್ಯ | 68% | 32% | 67% | 33% | 68% | 32% | 69% | 31% | 69% | 31% | 68% | 32% |
| 22 | ಮೈಸೂರು | 67% | 33% | 64% | 36% | 65% | 35% | 64% | 36% | 64% | 36% | 65% | 35% |
| 23 | ರಾಯಚೂರು | 71% | 29% | 70% | 30% | 70% | 30% | 69% | 31% | 67% | 33% | 70% | 30% |
| 24 | ರಾಮನಗರ | 64% | 36% | 62% | 38% | 62% | 38% | 61% | 39% | 60% | 40% | 61% | 39% |
| 25 | ಶಿವಮೊಗ್ಗ | 69% | 31% | 67% | 33% | 67% | 33% | 68% | 32% | 66% | 34% | 66% | 34% |
| 26 | ತುಮಕೂರು | 58% | 42% | 54% | 46% | 55% | 45% | 56% | 44% | 53% | 47% | 54% | 46% |
| 27 | ಉಡುಪಿ | 51% | 49% | 38% | 62% | 34% | 66% | 33% | 67% | 31% | 69% | 31% | 69% |
| 28 | ಉತ್ತರ ಕನ್ನಡ | 55% | 45% | 52% | 48% | 56% | 44% | 57% | 43% | 57% | 43% | 55% | 45% |
| 29 | ವಿಜಯನಗರ | 2022-23ನೇ ಸಾಲಿನಲ್ಲಿ ಜಿಲ್ಲೆ ರಚನೆಯಾಗಿದೆ. | | | | 78% | 22% | 79% | 21% | 78% | 22% | 78% | 22% |
| 30 | ವಿಜಯಪುರ | 75% | 25% | 76% | 24% | 74% | 26% | 70% | 30% | 65% | 35% | 61% | 39% |
| 31 | ಯಾದಗಿರಿ | 85% | 15% | 84% | 16% | 85% | 15% | 84% | 16% | 82% | 18% | 83% | 17% |
| | ಒಟ್ಟು | **69%** | **31%** | **66%** | **34%** | **65%** | **35%** | **64%** | **36%** | **62%** | **38%** | **62%** | **38%** |

ಉಪ ನಿರ್ದೇಶಕರು (ತಾಯಿ ಆರೋಗ್ಯ)
ಆರೋಗ್ಯ ಮತ್ತು ಕು.ಕ. ಸೇವೆಗಳ ನಿರ್ದೇಶನಾಲಯ
ಬೆಂಗಳೂರು-560 009

ಅನುಬಂಧ-2 ಪ್ರಶ್ನೆ ಸಂಖ್ಯೆ-60

## ಗರ್ಭಿಣಿಯರಿಗೆ ತಪಾಸಣೆ ಮಾಡುವ ಸಂದರ್ಭದಲ್ಲಿ ಸರ್ಕಾರಿ & ಖಾಸಗಿ ಆಸ್ಪತ್ರೆಗಳು ಅನುಸರಿಬೇಕಾದ ನಿಯಮಗಳು

1. ನೋಂದಾಣಿಯಾಗಿರುವ ಎಲ್ಲಾ ಗರ್ಭಿಣಿಯರನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿ, ತೊಡಕಿನ ಗರ್ಭಿಣಿಯರನ್ನು ಪತ್ತೆ ಹಚ್ಚುವುದು.
2. ಪ್ರತಿ ಗರ್ಭಿಣಿಗೆ ಜೆಸ್ಟೋಸಿಸ್ ಅಂಕವನ್ನು ಮಾಪನ ಮಾಡಿ, ಅಧಿಕ ರಕ್ತ ಒತ್ತಡವನ್ನು ತಡೆಯಲು ಮುನ್ನೆಚ್ಚರಿಕೆ ಔಷಧಿಯಾದ ಆಸ್ಪಿರಿನ್ ಮತ್ತು ಕ್ಯಾಲ್ಸಿಯಂ ಮಾತ್ರೆಗಳನ್ನು ನೀಡುವುದು.
3. ಗರ್ಭಧಾರಣೆಯ 3 ತಿಂಗಳ ಮೊದಲು ಮತ್ತು ಗರ್ಭಧಾರಣೆಯ 1 ನೇ ತ್ರೈಮಾಸಿಕದಲ್ಲಿ ಫೋಲಿಕ್ ಆಮ್ಲ ಮಾತ್ರೆಗಳನ್ನು ಸೇವಿಸುವಂತೆ ಆಪ್ತಸಮಾಲೋಚನೆಯನ್ನು ನಡೆಸಿ ಮಾತ್ರೆಗಳನ್ನು ನೀಡುವುದು.
4. ಕ್ಯಾಲ್ಸಿಯಂ ಮಾತ್ರೆಗಳನ್ನು ಗರ್ಭಧಾರಣೆಯ 14 ನೇ ವಾರದಿಂದ ಹೆರಿಗೆವರೆಗೂ ಮತ್ತು ಮೊದಲ 6 ತಿಂಗಳ ಬಾಣಂತನ ನಂತರದ ಅವಧಿಯವರೆಗೆ ದಿನಕ್ಕೆ 2 ಬಾರಿ ಸೇವನೆಗೆ ಆಪ್ತಸಮಾಲೋಚನೆಯನ್ನು ನಡೆಸಿ ಮಾತ್ರೆಗಳನ್ನು ನೀಡುವುದು.
5. ಕಬ್ಬಿಣಾಂಶ ಮಾತ್ರೆಗಳನ್ನು ಗರ್ಭಧಾರಣೆಯ 14 ನೇ ವಾರದಿಂದ ಹೆರಿಗೆವರೆಗೂ ಮತ್ತು ಮೊದಲ 6 ತಿಂಗಳ ಬಾಣಂತನ ನಂತರದ ಅವಧಿಯವರೆಗೆ ದಿನಕ್ಕೆ 1/2 ಬಾರಿ ಸೇವನೆಗೆ ಆಪ್ತಸಮಾಲೋಚನೆಯನ್ನು ನಡೆಸಿ ಮಾತ್ರೆಗಳನ್ನು ನೀಡುವುದು.
6. ಸರ್ಕಾರಿ ಆಸ್ಪತ್ರೆಗಳು ಪ್ರತಿ ತಿಂಗಳ 9 ಮತ್ತು 24 ರಂದು PMSMA ಮತ್ತು e-PMSMA ದಿನಗಳ ಗುಣಮಟ್ಟವನ್ನು ಸುಧಾರಿಸುವುದು.
7. ಎಲ್ಲಾ ತೊಡಕಿನ ಗರ್ಭಿಣಿಯರಿಗೆ 8 ತಿಂಗಳು ಮುಗಿದ ಕೂಡಲೇ Birth Planning ಸಿದ್ಧಪಡಿಸಿ ಗರ್ಭಿಣಿ ಮತ್ತು ಅವರ ಕುಟುಂಬಕ್ಕೆ ಹಾಗೂ ಸಂಬಂಧಿಸಿದ ಹೆರಿಗೆ ನೆರವೇರಿಸುವ ಆಸ್ಪತ್ರೆಗಳಿಗೆ ತಿಳಿಸುವುದು.
8. ಅತೀವ್ರ ರಕ್ತ ಸ್ರಾವದ (Haemorrhage) ಪ್ರಕರಣಗಳ ಬಾಣಂತಿಯರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೇಲ್ದರ್ಜೆ ಆಸ್ಪತ್ರೆಗೆ ಶಿಫಾರಸ್ಸು ಮಾಡುವಾಗ Non pneumatic Antishock garments (NASG) ಗಳನ್ನು ಕಡ್ಡಾಯವಾಗಿ ಉಪಯೋಗಿಸುವುದು.
9. ಎಲ್ಲಾ ತೊಡಕಿನ ಗರ್ಭಿಣಿಯರ ಹಿಂದಿನ ಗರ್ಭಧಾರಣೆಯ ಮಾಹಿತಿ ಒಳಗೊಂಡಂತೆ ಸಂಪೂರ್ಣ ಆರೋಗ್ಯದ ವಿವರಗಳನ್ನು ಪಡೆಯುವುದು ಮತ್ತು ತಾಯಿ ಕಾರ್ಡ ನಲ್ಲಿ ದಾಖಲಿಸುವುದು.
10. ಗರ್ಣಿಣಿಯರಿಗೆ 9 ತಿಂಗಳ ಗರ್ಭಾವ್ಯಸ್ಥೆಯಲ್ಲಿ ಅನುಸರಿಸಬೇಕಾದ ಅಂಶಗಳಾದ ಪೌಷ್ಟಕ ಅಹಾರ ಸೇವನೆ, ತೊಡಕಿನ ಗರ್ಭಾಧಾರಣೆ ಮತ್ತು ತೊಡಕುಗಳನ್ನು ನೀವಾರಿಸುವ ಸಲಹೆಗಳು 9 ತಿಂಗಳ ಅವಧಿಯಲ್ಲಿ ಗಳಿಸಬೇಕಿರುವ ಸರಿಯಾದ ತೂಕ, ಅಪಾಯದ ಲಕ್ಷಣಗಳು ಮತ್ತು ಚಿಕಿತ್ಸೆಗಾಗಿ ಆಸ್ಪತ್ರೆಗೆ ಧಾವಿಸಬೇಕಾದ ಸಂದರ್ಭಗಳು ಇತ್ಯಾದಿ ಬಗ್ಗೆ ತಿಳುವಳಿಕೆವನ್ನು ಮೂಡಿಸುವುದು.
11. ಗರ್ಭಿಣಿ ತಪಾಸಣೆ ಸಮಯದಲ್ಲಿ ಅವಶ್ಯವಿರುವ ಪರೀಕ್ಷೆಗಳನ್ನು ನರವೇರಿಸುವುದು ಮತ್ತು ಪ್ರತಿ ಪರೀಕ್ಷೆಯ ಮಾಹಿತಿಯನ್ನು ಗರ್ಭಿಣಿಯರಿಗೆ ಅರ್ಥವಾಗುವಂತೆ ವಿವರಿಸುವುದು.
12. ಪ್ರಸವಕ್ಕಾಗಿ ಹೆರಿಗೆ ಆಸ್ಪತ್ರೆಗೆ ದಾಖಲಾಗುವ ಸಮಯದಲ್ಲಿ ಕೆಳಕಂಡ ನೀತಿ ನಿಯಮಗಳನ್ನು ಅನುಸರಿಸುವುದು.
    - ಪ್ರಸವದಲ್ಲಿರುವ ತಾಯಿಯಲ್ಲಿ ತೊಡಕಿನ ಲಕ್ಷಣಗಳನ್ನು ಪತ್ತೆಹಚ್ಚುವುದು ಮತ್ತು ತಮ್ಮ ಆಸ್ಪತ್ರೆಯಲ್ಲಿ ಇಂತಹ ತೊಡಕಿನ ಗರ್ಭಿಣಿಯರಿಗೆ ಚಿಕಿತ್ಸೆಯನ್ನು ನೀಡಲು ಸಾಧ್ಯವಿಲ್ಲವಾದರೆ ಕೂಡಲೇ ಉನ್ನತ ಆಸ್ಪತ್ರೆಗೆ ಶಿಫಾರಸ್ಸು ಮಾಡುವುದು
    - ಒಂದು ವೇಳೆ ತಮ್ಮ ಆಸ್ಪತ್ರೆಯು ತೊಡಕಿನ ಗರ್ಭಿಣಿಯರಿಗೆ ಚಿಕಿತ್ಸೆಯನ್ನು ನೀಡಲು ಯೋಗ್ಯವಾಗಿದ್ದಲ್ಲಿ ಪ್ರಸವ ಸಮಯದಲ್ಲಿ ಪೂರ್ವ ನಿಗಧಿತ ವೇಳಾ ಪಟ್ಟಿಯಂತೆ ಪರೀಕ್ಷೆಯನ್ನು ನಡೆಸಿ ಸುಸೂತ್ರವಾಗಿ ಸಹಜ ಹೆರಿಗೆ ಆಗುವಂತೆ ನೋಡಿಕೊಳ್ಳುವುದು. ಒಂದು ವೇಳೆ ತಾಯಿ ಮತ್ತು ಮಗುವಿನ ಪರಿಸ್ಥಿತಿಯು ಹದಗೆಟ್ಟಲ್ಲಿ ನಿಯಮದಂತೆ ಸಿಜೇರಿಯನ್ ಶಸ್ತ್ರ ಚಿಕಿತ್ಸೆ ನೆರವೇರಿಸುವುದು.
13. ಪ್ರಸವ ಮತ್ತು ಪ್ರಸವೋತ್ತರ ಸಮಯದಲ್ಲಿ ಗರ್ಭಿಣಿಯ ಗೌರವಕ್ಕೆ ಚ್ಯುತಿ ಬಾರದಂತೆ ನಡೆದುಕೊಳ್ಳುವುದು.
14. ಖಾಸಗಿ ಆಸ್ಪತ್ರೆಗಳು ಅನಾವಶ್ಯಕ ಪರೀಕ್ಷೆಗಳನ್ನು ನಡೆಸಬಾರದು ಮತ್ತು ಪೂರ್ವ ನಿಗಧಿಪಡಿಸಿರುವ ವೆಚ್ಚಕ್ಕಿಂತ ಹೆಚ್ಚಿನ ಹಣವನ್ನು ಪಡೆಯಬಾರದು.
15. ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು ಪ್ರಸವ ಸಮಯದಲ್ಲಿ ಪೂರ್ಣಪ್ರಮಾಣದ ಜಾಗರೂಕತೆಯನ್ನು ಅನುಸರಿಸುವುದು ಮತ್ತು ಪ್ರಸವ ಶಾಸ್ತ್ರದಲ್ಲಿ ಪರಿಣಿತಿಯನ್ನು ಹೊಂದಿರುವ ಸೂಕ್ತ ಸಿಬ್ಬಂದಿಯನ್ನು ನಿಯೋಜಿಸುವುದು.
16. ಈ ಮೇಲ್ಕಂಡ ನೀತಿ ನಿಯಮಗಳನ್ನು ಒಳಗೊಂಡಂತೆ ಗುಣಮಟ್ಟವನ್ನು ಸಾಧಿಸುವಂತೆ ಸರ್ಕಾರಿ ಆಸ್ಪತ್ರೆಗಳನ್ನು ಎನ್ ಕ್ಯೂ. ಎ. ಎಸ್ ಮೌಲ್ಯ ಮಾಪನಕ್ಕೆ ಒಳಪಡಿಸಲಾಗುತ್ತದೆ ಮತ್ತು ಅಗತ್ಯ ಮಾರ್ಗದರ್ಶನದೊಂದಿಗೆ ಗುಣಮಟ್ಟವನ್ನು ಕಾಯ್ದಿರಿಸಲಾಗುತ್ತದೆ.

ಈ ಮೇಲ್ಕಂಡ ನೀತಿ ನಿಯಮಗಳ ವಿರುದ್ಧವಾಗಿ ನಡೆದುಕೊಂಡ ಆಸ್ಪತ್ರೆಗಳ ಮೇಲೆ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲಾಗಿದೆ

1. ಎನ್ ಕ್ಯೂ. ಎ. ಎಸ್ ಮೌಲ್ಯ ಮಾಪನದಲ್ಲಿ ಗುಣಮಟ್ಟವನ್ನು ಕಾಯ್ದುಕೊಳ್ಳುವಲ್ಲಿ ವಿಫಲವಾದ ಸರ್ಕಾರಿ ಆಸ್ಪತ್ರೆಗಳಿಗೆ ಎ.ಬಿ.ಎ.ಆರ್.ಕೆ ಯೋಜನೆಯಡಿಯಲ್ಲಿ ಸಿಬ್ಬಂದಿ ಪ್ರೋತ್ಸಾಹ ಧನವನ್ನು ತಡೆಹಿಡಿಯಲಾಗಿದೆ.
2. ಗರ್ಭಿಣಿ ತಪಾಸಣೆಯಲ್ಲಿ ನೀತಿ ನಿಯಮಗಳನ್ನು ಅನುಸರಿಸದೇ ಇರುವ ವೈದ್ಯರು ಮತ್ತು ಸಿಬ್ಬಂದಿಯ ಮೇಲೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಲಾಗಿರುತ್ತದೆ.
3. ಸೂಕ್ತವಾದ ಸಮಜಾಯಷಿಯನ್ನು ನೀಡದಿರುವ ವೈದ್ಯರು ಮತ್ತು ಸಿಬ್ಬಂದಿಯನ್ನು ಕರ್ತವ್ಯದಿಂದ ಅಮಾನತು ಮಾಡಲಾಗಿರುತ್ತದೆ.
4. ತಪ್ಪಿತಸ್ಥ ಖಾಸಗಿ ಆಸ್ಪತ್ರೆಗಳ ವಿರುದ್ಧ ವಿಚಾರಣೆಯನ್ನುಕೆ.ಪಿ.ಎಂ.ಇ ಕಾಯ್ದೆಅಡಿಯಲ್ಲಿ ನಡೆಸಲಾಗುತ್ತಿದೆ.

ಉಪ ನಿರ್ದೇಶಕರು (ತಾಯಿ ಆರೋಗ್ಯ)